# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 116 ಜಿಪಸ 2013(ಪಿ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 30-07-2013

## ಸುತ್ತೋಲೆ

ವಿಷಯ: ಭಾರತದ ರಾಷ್ಟ್ರ ಧ್ವಜವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳಲ್ಲಿ ಪ್ರತಿದಿನ ಹಾರಿಸುವ ಬಗ್ಗೆ.

********

ಭಾರತದ ರಾಷ್ಟ್ರ ಧ್ವಜವು ಸಮಗ್ರ ಭಾರತೀಯರ ಭರವಸೆ, ಭಾವೈಕ್ಯತೆ, ಮಹತ್ವಾಕಾಂಕ್ಷೆ ಹಾಗೂ ಹೆಮ್ಮೆಯ ಪ್ರತೀಕವಾಗಿದೆ. ರಾಷ್ಟ್ರ ಧ್ವಜದ ಬಗ್ಗೆ ಸಾರ್ವತ್ರಿಕ ವಾತ್ಸಲ್ಯ, ಗೌರವ ಹಾಗೂ ಸ್ವಾಮಿನಿಷ್ಠೆಯನ್ನು ಭಾರತೀಯರು ವ್ಯಕ್ತ ಪಡಿಸಬೇಕಾಗಿದೆ. ರಾಷ್ಟ್ರೀಯ ಸ್ವಾಭಿಮಾನ, ವೈಭವ ಹಾಗೂ ಹೆಗ್ಗಳಿಕೆಯ ಪ್ರತೀಕವಾಗಿರುವ ರಾಷ್ಟ್ರ ಧ್ವಜವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಹಾಗೂ ಜಿಲ್ಲಾ ಪಂಚಾಯತಿಗಳು ತಮ್ಮ ಕಾರ್ಯಾಲಯದ ಆವರಣದಲ್ಲಿ ನಿರ್ಮಿಸಿರುವ ಧ್ವಜ ಸ್ತಂಭದಲ್ಲಿ ಪ್ರತಿದಿನ ಘನತೆ ಮತ್ತು ಗೌರವಯುತವಾಗಿ ಹಾರಾಡಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

ರಾಷ್ಟ್ರ ಧ್ವಜ ಪ್ರದರ್ಶನವನ್ನು "ಲಾಂಛನ ಮತ್ತು ಅಭಿದಾನ(ಅಸಮರ್ಪಕ ಬಳಕೆಯ ತಡೆ)ಕಾಯಿದೆ, 1950, ಮತ್ತು 'ರಾಷ್ಟ್ರ ಘನತೆಯಡೆಗಿನ ಅಪಮಾನ ತಡೆ ಕಾಯಿದೆ, 1971 ಇವುಗಳ ಅನುಗುಣವಾಗಿ ಭಾರತದ ಧ್ವಜ ಸಂಹಿತೆ 2002 ಅನ್ನು ರೂಪಸಿದ್ದು, ಇದರಲ್ಲಿ ರಾಷ್ಟ್ರ ಧ್ವಜದ ಪ್ರದರ್ಶನಕ್ಕೆ ಸಂಬಂಧಿಸಿದ ಎಲ್ಲಾ ನಿಯಮಗಳು, ಆಚರಣೆ, ಸಂಪ್ರದಾಯ ಮತ್ತು ಸೂಚನೆಗಳು ಒಳಗೊಂಡಿರುತ್ತವೆ

ಈ ಮಾರ್ಗಸೂಚಿಗಳಲ್ಲಿ ತಿಳಿಸಿರುವ ಶಿಷ್ಠಾಚಾರ ಮತ್ತು ನಿಯಮಗಳನ್ವಯ ರಾಷ್ಟ್ರ ಧ್ವಜವನ್ನು ಪ್ರತಿನಿತ್ಯ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳ ಆವರಣದ ಧ್ವಜ ಸ್ತಂಭದ ಮೇಲೆ ತಪ್ಪದೇ ಪ್ರದರ್ಶಿಸಲು ಸಂಬಂಧಿಸಿದ ಕಛೇರಿಗಳ ಮುಖ್ಯಸ್ಥರುಗಳು ಕ್ರಮ ವಹಿಸಬೇಕೆಂದು ಕಟ್ಟು ನಿಟ್ಟಿನ ಸೂಚನೆ ನೀಡಲಾಗಿದೆ. **2013ರ ಆಗಸ್ಟ್ 15 ರಿಂದ ಪ್ರಾರಂಭಿಸಿ ನಿರಂತರವಾಗಿ ಪ್ರತಿದಿನ ನಿಯಮಾನುಸಾರ** ರಾಷ್ಟ್ರ ಧ್ವಜವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳ ಆವರಣದ ಧ್ವಜ ಸ್ತಂಭದ ಮೇಲೆ ಹಾರಿಸಲು ಕ್ರಮವಹಿಸುವಂತೆ ಸೂಚಿಸಲಾಗಿದೆ. ರಾಷ್ಟ್ರ ಧ್ವಜಾರೋಹಣಕ್ಕೆ ಸಂಬಂಧಿಸಿದ ಸಂಕ್ಷಿಪ್ತ ವಿಧಿವಿಧಾನಗಳನ್ನು ಕೆಳಗೆ ನಮೂದಿಸಲಾಗಿದೆ.

1. ಈಗಾಗಲೇ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಕಛೇರಿಗಳ ಆವರಣದಲ್ಲಿ ಧ್ವಜ ಸ್ತಂಭಗಳಿದ್ದಲ್ಲಿ ಅದನ್ನೇ ಬಳಸುವುದು ಹಾಗೂ ಯಾವುದಾದರೂ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ ಧ್ವಜ ಸ್ತಂಭಗಳಿಲ್ಲದ ಸಂದರ್ಭದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಸಹಯೋಗದೊಂದಿಗೆ ಕೂಡಲೇ ಧ್ವಜ ಸ್ತಂಭವನ್ನು ನಿರ್ಮಿಸಲು ಕ್ರಮವಹಿಸುವುದು. ಧ್ವಜ ಸ್ತಂಭವು ಕಟ್ಟಡದ ಮುಂಭಾಗ ಅಥವಾ ಕಟ್ಟಡದ ಮೇಲೆ ಇರುವುದನ್ನು ಖಚಿತಪಡಿಸಿಕೊಳ್ಳುವುದು. ಇದಕ್ಕೆ ಸಂಬಂಧಿಸಿದ ವೆಚ್ಚವನ್ನು ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ 'ನಿಧಿ'ಗಳಿಂದ ಭರಿಸುವುದು.(ಸ್ವಂತ ಸಂಪನ್ಮೂಲ ಅಥವಾ 13ನೇ ಹಣಕಾಸು ಆಯೋಗದ ಅನುದಾನದಿಂದ ವೆಚ್ಚ ಭರಿಸಿ, ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆಯುವುದು)
2. ಧ್ವಜ ಸಂಹಿತೆಯಲ್ಲಿ ನಮೂದಿಸಿರುವ ಭಾಗ-I ರ ಅಳತೆಯ ಧ್ವಜಗಳು ಅಂದರೆ 4(1800*1200ಮಿ.ಮೀ), 5(1350*900ಮಿ.ಮೀ), ಮತ್ತು 6(900*600ಮಿ.ಮೀ) ರಂತೆ ಕ್ರಮವಾಗಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳು ಅಳಡಿಸಿಕೊಳ್ಳುವುದು.
3. ಪ್ರತಿಯೊಂದು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಹಾಗೂ ಜಿಲ್ಲಾ ಪಂಚಾಯತಿಗಳು ಒಂದೇ ಬಾರಿಗೆ ತಲಾ 3 ರಾಷ್ಟ್ರಧ್ವಜಗಳನ್ನು ಸ್ಥಳೀಯ ಸರ್ಕಾರಿ ಅಧಿಕೃತ ಖಾದಿ ಭಂಡಾರಗಳಿಂದ ಖರೀದಿಸಲು ಕ್ರಮ ವಹಿಸುವುದು.
4. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಹಾಗೂ ಜಿಲ್ಲಾ ಪಂಚಾಯತಿಗಳು ತಮ್ಮಲ್ಲಿನ ನಿಧಿಗಳಿಂದ ಹಾಗೂ ಸ್ವಂತ ಸಂಪನ್ಮೂಲ ಅಥವಾ 13ನೇ ಹಣಕಾಸು ಆಯೋಗದ ಅನುದಾನದಿಂದ ರಾಷ್ಟ್ರಧ್ವಜಗಳನ್ನು ಖರೀದಿಸುವುದು.
5. ಗ್ರಾಮ ಪಂಚಾಯತಿಗಳು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ನೇತೃತ್ವದಲ್ಲಿ ಕಾರ್ಯದರ್ಶಿ, ಬಿಲ್ ಕಲೆಕ್ಟರ್ ಹಾಗೂ ವಾಟರ್‌ಮನ್‌ಗಳ ಸಮನ್ವಯತೆಯೊಂದಿಗೆ ರಾಷ್ಟ್ರ ಧ್ವಜವನ್ನು ಹಾರಿಸುವ ಹಾಗೂ ಇಳಿಸುವ ಜವಾಬ್ದಾರಿಯ ಕಾರ್ಯ ನಿರ್ವಹಿಸುವುದು. ತಾಲ್ಲೂಕಾ ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ಧರಿಸುವ ನೌಕರರು/ಸಿಬ್ಬಂದಿ ವರ್ಗದವರ ಸಮನ್ವಯತೆಯೊಂದಿಗೆ ರಾಷ್ಟ್ರ ಧ್ವಜವನ್ನು ಹಾರಿಸುವ ಹಾಗೂ ಇಳಿಸುವ ಜವಾಬ್ದಾರಿಯ ಕಾರ್ಯ ನಿರ್ವಹಿಸುವುದು. ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿರ್ಧರಿಸುವ ನೌಕರರು/ಸಿಬ್ಬಂದಿ ವರ್ಗದವರ ಸಮನ್ವಯತೆಯೊಂದಿಗೆ ರಾಷ್ಟ್ರ ಧ್ವಜವನ್ನು ಹಾರಿಸುವ ಹಾಗೂ ಇಳಿಸುವ ಜವಾಬ್ದಾರಿಯ ಕಾರ್ಯ ನಿರ್ವಹಿಸುವುದು.
6. ಧ್ವಜ ಸಂಹಿತೆಯ ಉದ್ಧೃತ ಭಾಗ ಮತ್ತು ಕನ್ನಡ ಅನುವಾದವನ್ನು ಸಹ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದ್ದು, ಅದರಿಂದ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳುವುದು.

7. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಸಿಬ್ಬಂದಿಗಳಿಗೆ ರಾಷ್ಟ್ರ ಧ್ವಜವನ್ನು ಹಾರಿಸುವ ವಿಧಾನದ ಬಗ್ಗೆ ಸ್ಥಳೀಯ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಕರಿಂದ ತರಬೇತಿ ಕೊಡಿಸುವುದು. ಈ ತರಬೇತಿಯನ್ನು ಸತತವಾಗಿ ಆಗಸ್ಟ್ ಮೊದಲನೆಯ ವಾರದಲ್ಲಿ ನಡೆಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಂತದಲ್ಲಿ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು, ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಭೆಯನ್ನು ಕರೆದು ಕ್ರಮ ತೆಗೆದುಕೊಳ್ಳುವುದು.

8. ರಾಷ್ಟ್ರ ಧ್ವಜವನ್ನು ಏರಿಸುವ ಹಾಗೂ ಇಳಿಸುವ ಪದ್ಧತಿಯ ಮಾದರಿ ಪ್ರಾತ್ಯಕ್ಷಿಕೆಯನ್ನು ಯು-ಟ್ಯೂಬ್‌ನಲ್ಲಿ ಅಳವಡಿಸಿ, ಪ್ರಚುರಪಡಿಸಲು ಎಸ್.ಐ.ಆರ್.ಡಿಯು ಕ್ರಮವಹಿಸುವುದು.

ಭಾರತದ ಧ್ವಜ ಸಂಹಿತೆ 2002ರ ಪ್ರಕಾರ ಧ್ವಜ ಪ್ರದರ್ಶನಕ್ಕೆ ನಿಗಧಿ ಪಡಿಸಿರುವ ನಿಬಂಧನೆಗಳನ್ನು ಕಟ್ಟು ನಿಟ್ಟಾಗಿ ಅನುಸರಿಸುವುದು ಹಾಗೂ ಯಾವುದೇ ಸಂದಂರ್ಭದಲ್ಲೂ ಧ್ವಜದ ಗೌರವ ಮತ್ತು ಘನತೆಗೆ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸುವುದು.

(ಟಿ.ಎಂ.ವಿಜಯಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಮಾಹಿತಿಗಾಗಿ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
2. ರಾಜ್ಯದ ಎಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು.
6. ರಾಜ್ಯದ ಎಲ್ಲಾ ಎಲ್ಲಾ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು.
7. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
8. ರಾಜ್ಯದ ಎಲ್ಲಾ ತಾಲ್ಲೂಕಿನ ತಹಶೀಲ್ದಾರರು.
9. ರಾಜ್ಯದ ಎಲ್ಲಾ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು.
10. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.